

## ಬಿಳಿತಾಡಿಗೆಯ ಮೂಕರೋದನ

ಬಿಸಿಲಿನ ಝಳಕ್ಕೆ ಸೋತು ಮೈಮನಗಳನ್ನು ತಂಪಾಗಿಸಲೆಂದು ಊರಹೊರಗಿನ ಕರಿಬಯಲಿನಲ್ಲಿದ್ದ ಹಳ್ಳದತ್ತ ಹೊರಟೆ. ನನ್ನ ಬರುವಿಕೆಯಿಂದ ಗಾಬರಿಗೊಂಡ ಜಲಪಕ್ಷಿಗಳು ತಮ್ಮ ವಿಶಾಲ ಪಂಖಗಳನ್ನು ಬೀಸಿ ಅಲ್ಲಿಂದ ಹಾರಿದವು. ಆದರೆ ಒಂದು ಹಕ್ಕಿ ಮಾತ್ರ ಹಾರದೇ ಗಾಬರಿಯಿಂದ ನೆಲಕ್ಕೆ ರೆಕ್ಕೆ ಬಡಿಯುತ್ತಾ ತೆವಳುತ್ತಿತ್ತು.

ಆ ಹಕ್ಕಿ ಹಾರದೇ ತೆವಳುವುದನ್ನು ಕಂಡಾಗಲೇ ಖಾತರಿಯಾಯ್ತು, ಅದಕ್ಕೇನೋ ಅಪಾಯವಾಗಿದೆ ಅಂತ. ಹತ್ತಿರ ಹೋಗಿ ನೋಡಿದೆ. ಅದು ನಮ್ಮ ಗ್ರಾಮ್ಯಭಾಷೆಯಲ್ಲಿ ‘ಬಿಳಿತಾಡಿಗೆ’ (**White Ibis**) ಎಂದು ಕರೆಯಲಾಗುವ ಜಲಪಕ್ಷಿಯಾಗಿತ್ತು. ನನ್ನನ್ನು ವೈರಿಯಂತೆ ಭಾವಿಸಿದ ಹಕ್ಕಿಯು ನಾನು ಅದರ ಹತ್ತಿರ ಬಂದರೆ ಬಲವಾಗಿ ಕುಕ್ಕುವುದಾಗಿ ಬೆದರಿಸುತ್ತಿತ್ತು. ತನ್ನ ಮುಖವನ್ನು ಸುತ್ತಲೂ ತಿರುಗಿಸುತ್ತಾ ಕೊಕ್ಕಿನ ಆಯುಧದಿಂದ ಕುಕ್ಕಲು ನೋಡುತ್ತಿತ್ತು, ಅದರ ಗಮನ ಬೇರೆಡೆ ಸೆಳೆದು ಅದರ ರೆಕ್ಕೆಗಳ ತುದಿಯನ್ನು ಹಿಡಿದು ಮೇಲೆತ್ತಿದೆ. ಅದರ ಕಾಲುಗಳೆರಡೂ ಮೂಳೆ ಮುರಿದುಕೊಂಡು ಜೋಲಾಡುತ್ತಿದ್ದವು. ರೆಕ್ಕೆಯ ಒಳಗೂ ಗಾಯವಾಗಿ ರಕ್ತ ಗರಣೆಗಟ್ಟಿರುವುದೂ ಕಾಣಿಸಿತು. ಗಾಯದ ಇಲಾಜು ಮಾಡಲು ಆ ಬಯಲಿನಲ್ಲಿ ಯಾವ ಅವಕಾಶವೂ ಇಲ್ಲದಾಗಿತ್ತು. ಜೊತೆಗೆ ನಿಮಿಷದಿಂದ ನಿಮಿಷಕ್ಕೆ ಆ ಹಕ್ಕಿ ನಿಸ್ತೇಜಗೊಳ್ಳುತ್ತಾ ಸಾಗಿತ್ತು.

ರಕ್ಷಣಾ ಕಾರ್ಯದಲ್ಲಿದ್ದಾಗ ಕೆಲವೊಮ್ಮೆ ಇಂತಹ ಸಂದರ್ಭಗಳು ಎದುರಾಗುತ್ತವೆ. ಇಲ್ಲಿ ಜೀವಿಯನ್ನು ಉಳಿಸಿಕೊಳ್ಳುವ ಅವಕಾಶ ತೀರಾ ಕಡಿಮೆ ಇರುತ್ತದೆ. ಹಾಗೊಂದು ವೇಳೆ ತುರ್ತಾಗಿ ಉಳಿಸಿಕೊಳ್ಳಲು ಯತ್ನಿಸಿದರೆ ಅಷ್ಟೇ ತುರ್ತಾಗಿ ಜೀವಿಯು ಅಸುನೀಗುತ್ತದೆ. ಇಂತಹ ಸಂದರ್ಭಗಳಲ್ಲಿ ಜೀವಿಯನ್ನು ಸಂಪೂರ್ಣವಾಗಿ ಪ್ರಕೃತಿಯ ತೆಕ್ಕೆಗೆ ಬಿಡುವುದೊಂದೇ ನಮಗಿರುವ ಆಯ್ಕೆ. ಆದ್ದರಿಂದ ನಿಮಿಷನಿಮಿಷಕ್ಕೂ ಸಾವಿನ ದವಡೆಗೆ ಸಾಗುತ್ತಿದ್ದ ಆ ಮೂಕಹಕ್ಕಿಯನ್ನು ಗಾಬರಿಪಡಿಸದೆ ಹಿನ್ನೀರಿನ ಮಡಿಲಿಗೆ ಅರ್ಪಿಸಿ, ಭಾರವಾದ ಹೃದಯದೊಂದಿಗೆ ಅಲ್ಲಿಂದ ಸಾಧ್ಯವಾದಷ್ಟು ವೇಗದಲ್ಲಿ ದೂರ ಬಂದೆ. ಹಿಂದಿರುಗಿ ನೋಡಿದಾಗ ಮತ್ತೆ ಎಲ್ಲ ಜಲಪಕ್ಷಿಗಳು ವೃತ್ತಾಕಾರವಾಗಿ ಸುತ್ತುತ್ತಾ ನೀರಿನ ತಡಿಗೆ ಲ್ಯಾಂಡ್ ಆಗುತ್ತಿದ್ದವು. ಅವುಗಳ ಸಂತೆಯೊಳಗೆ ಕಾಲುಮುರಿದುಕೊಂಡಿದ್ದ ಹಕ್ಕಿ ಕಾಣೆಯಾಗಿತ್ತು. ಅದ್ಯಾವ ಅಪಘಾತದಲ್ಲಿ ಅದಕ್ಕೆ ಗಾಯವಾಗಿತ್ತೋ ತಿಳಿಯದಾಯಿತು.

**–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ**



## ಮೀನು ತಿನ್ನೋಣ ಬನ್ನಿ

ಮಂಗಳೂರು ಮೀನುಗಾರಿಕೆಗೆ ಪ್ರಸಿದ್ಧವಾದ ಪ್ರದೇಶವಾಗಿದ್ದು, ಇಲ್ಲಿನ ಬಹುತೇಕ ಮಂದಿ ಮತ್ಸ್ಯ ಪ್ರಿಯರು! ನಗರದ ಬೋಳೂರಿನಲ್ಲಿರುವ ಸುಲ್ತಾನ್ ಬತ್ತೇರಿಯ ಬಳಿಯಲ್ಲಿರುವ ಪಾರ್ಕ್ ಅಭಿವೃದ್ಧಿಗೊಳಿಸಲಾಗಿದ್ದು, ಪ್ರವೇಶ ದ್ವಾರದಲ್ಲಿ ಸಾಂಪ್ರದಾಯಿಕ ಶೈಲಿಯ ಉಡುಗೆ ತೊಟ್ಟ ಮೀನುಗಾರ ದಂಪತಿ ಬೃಹತ್ ಗಾತ್ರದ ಮೀನನ್ನು ಹಿಡಿದು ನಿಂತಿರುವ ಪ್ರತಿಕೃತಿಯನ್ನು ಸ್ಥಾಪಿಸಲಾಗಿದೆ. ಇದು ಎಲ್ಲರ ಗಮನ ಸೆಳೆಯುತ್ತಿದೆ. ಸುಲ್ತಾನ್ ಬತ್ತೇರಿ ಟಿಪ್ಪು ಸುಲ್ತಾನ್ ಕಟ್ಟಿಸಿದ ಕೋಟೆ ಎಂಬ ಐತಿಹ್ಯ ಹೊಂದಿದ್ದು, ಫಲ್ಗುಣಿ ನದಿಯ ದಡದಲ್ಲಿದೆ. ಇಲ್ಲಿಂದ ಸಮುದ್ರ ಕಿನಾರೆಗೆ ತೆರಳಲು ಬೋಟ್ ಸೌಲಭ್ಯವಿದ್ದು ರಜಾ ದಿನಗಳಲ್ಲಿ ಕಿಕ್ಕಿರಿದ ಜನಸಂದಣಿ ಇಲ್ಲಿ ಕಾಣಬಹುದಾಗಿದೆ.

**–ಸತೀಶ್ ಶೆಟ್ಟಿ ಕೊಡಿಯಾಲ್‌ಬೈಲ್,**
**ಮಂಗಳೂರು**

## ಜ್ಞಾನೋದಯದ ಪ್ರತೀಕ

ಅರುಣಾಚಲ ಪ್ರದೇಶದ ತವಾಂಗ್ ಪಟ್ಟಣ ಪ್ರೇಕ್ಷಣೀಯ ಸ್ಥಳಗಳಲ್ಲೊಂದು. 2015ರಲ್ಲಿ ಎಚ್ ಇ ತೆಗ್ಸೆ ರಿಂಪೋಚೆಯಿಂದ ಪವಿತ್ರ ಸ್ಥಳವೆಂದು ಘೋಷಿಸಲ್ಪಟ್ಟ ಬುದ್ಧ ಪಾರ್ಕ್ ಸಹ ತವಾಂಗ್ ಪಟ್ಟಣದಲ್ಲಿದೆ. ತವಾಂಗ್‌ನ ಗುಡ್ಡವೊಂದರಲ್ಲಿ ಕಲಾತ್ಮಕ, ಸುಂದರ ಪ್ರಾರ್ಥನಾ ಮಂದಿರದ ಮೇಲೆ ನಿರ್ಮಿಸಲಾದ ದೈತ್ಯ ಬುದ್ಧನ ವಿಗ್ರಹ ಮನೋಹರವಾಗಿದೆ. ಪಟ್ಟಣದ ಎಲ್ಲೆಡೆಯಿಂದಲೂ ನೋಡಬಹುದಾದ, ಛಾವಣಿ ಇಲ್ಲದ ವಿಗ್ರಹ ಇದಾಗಿದೆ. ನಾವು ಈ ಬುದ್ಧ ಪಾರ್ಕಿಗೆ ಭೇಟಿ ನೀಡಿದಾಗ ಎಲ್ಲೆಲ್ಲೂ ಮೋಡ ಕವಿದಿತ್ತು. ಆದರೆ ಚಿತ್ರದಲ್ಲಿ ಕಾಣುವಂತೆ ಬುದ್ಧ ವಿಗ್ರಹದ ತಲೆಯ ಮೇಲೆ ಮಾತ್ರ ಮೋಡವಿರದೆ ಶುಭ್ರ ನೀಲಾಕಾಶ ತೋರುತ್ತಿತ್ತು! ಇದು ‘ಬುದ್ಧಜಗವೆಲ್ಲ ಮಲಗಿರಲು ಅವನೊಬ್ಬನೆದ್ದ’ ಎಂಬುದನ್ನು ಹಾಗೂ ಬುದ್ಧನಿಗಾದ ಜ್ಞಾನೋದಯವನ್ನೂ ಸಂಕೇತಿಸುವಂತೆ ಕಂಡು ವಿಸ್ಮಯ ಮೂಡಿಸಿತು.

**–ಎಚ್.ಎಸ್. ನಂದಕುಮಾರ್, ಮಂಗಳೂರು**

